ಫ್ರೆಂಡ್ಸ್ ಎಲ್ಲ ಲ್ಯಾಂಡ್ ಫೋನಿಗೆ ಫೋನ್ ಮಾಡೋದನ್ನೇ ಬಿಟ್ಟುಬಿಟ್ಟರು. ಇವನು ಎತ್ತಿದನೆಂದರೆ ಆಕಡೆಯಿಂದ ಮಾತಾಡುವವರನ್ನು ಯಾವುದೋ ವಿಧವಾಗಿ ಅವಮಾನಿಸೋನು.

ಏನಿದು? ಇವನೆಂಥವನು? ಮೊದಲಿನಿಂದ ಹೀಗೇನಾ? ನಾನು ಗುರುತಿಸಲಿಲ್ಲವಾ ಅಂತ ಹಿಂದಿನದೆಲ್ಲ ನೆನಪು ಮಾಡಿಕೊಳ್ಳೋದೇ ಆಯ್ತು ನನ್ನ ಕೆಲಸ. ಮಾತಿಲ್ಲ. ಗಲಾಟೆಯಿಲ್ಲ. ಆ ವಯಸಿನ ಮಕ್ಕಳಲ್ಲಿ ಇರಬೇಕಾದ ಮುಗ್ಧತೆ ಇಲ್ಲ. ಚುರುಕುತನ ಇಲ್ಲ. ಯಾವಾಗ ನೋಡಿದರೂ ನಂಬ್ ಆಗಿರ್ತಾನೆ. ವಿಪರೀತವಾದ ಓದು. ಕಂಪ್ಯೂಟರ್‌ನಲ್ಲಿ ಗೇಮ್ಸ್. ನನ್ನ ಮೇಲೆ ನಿಗಾ ಇವು ಮೂರೇ ಕೆಲಸ ಅವನು ಮಾಡೋದು. ನೋಡ್ತಿದ್ದರೆ ನನಗೆ ಅಳು ಒತ್ತಿಕೊಂಡು ಬರೋದು. ಅಯ್ಯೋ ಒಬ್ಬ ತಾಯಿಯಾಗಿ ಮತ್ತೆ ಹೇಗೆ ಇವನ ಹತ್ತಿರ ಸೇರಿಕೊಳ್ಳೋದು ಅಂತ ತಲ್ಲಣಿಸಿ ಹೋಗ್ತಿದ್ದೆ. ಎಷ್ಟೋ ಪ್ರಯತ್ನಿಸಿ ನೋಡಿದೆ. ತುಂಬಾ ಪ್ರೀತಿಯಿಂದ ವರ್ತಿಸಿದೆ. ಲಾಭವಾಗಲಿಲ್ಲ. ದುಃಖ ಮನುಷ್ಯರನ್ನು ಹತ್ತಿರ ತರುತ್ತೆ ಅಂತಾರೆ. ಕೊನೆಗೆ ನನ್ನ ಅನಾರೋಗ್ಯ ಕೂಡ ಅವನನ್ನು ನನ್ನ ಹತ್ತಿರಕ್ಕೆ ತರಲಿಲ್ಲ. ಅಂಥ ದಿನಗಳು ಬಂದು ಬಿಟ್ಟವು...'

ಈ ಸಲ ಬಾಗಿಲ ಹತ್ತಿರ ಗಡುಸಾದ ದನಿ ಕೇಳಿತು.

ಆಕೆ ಮಾತಾಡೋದನ್ನು ನಿಲ್ಲಿಸಿ ಭಯಭೀತಳಾಗಿ ಅತ್ತ ನೋಡಿದಳು.

ಚಿನ್ನು ನಿಂತಿದ್ದ.

'ಚಿನ್ನೂ ಇನ್ನೂ ಮಲಕ್ಕೊಳ್ಳಿಲ್ವಾ ಬಂಗಾರ... ಬಂದೆ ನಡಿ' ಅಂದಳಾಕೆ ಕಳವಳದಿಂದ.

ಚಿನ್ನು ಏನೂ ಮಾತಾಡದೆ ನಮ್ಮತ್ತಲೇ ನೋಡುತ್ತ ನಿಂತಿದ್ದ.

ದಪ್ಪಗೆ ಊದಿಕೊಂಡು ಬೆಳೆದಿದ್ದ ದೇಹದೊಂದಿಗೆ ಆ ಕ್ಷಣಕ್ಕೆ ಅವನು ವಯಸಿಗೆ ಮೀರಿದ ಒಬ್ಬ ಗಂಡಸಿನಂತೆ ಕಾಣಿಸುತ್ತಿದ್ದ.

'ನಡೀ ಮಗಾ... ಬಂದೆ ನಡಿ.'

'ಇನ್ನೂ ಏನ್ ಮಾಡ್ತಿದೀಯ ಇಲ್ಲಿ?'

'ನಿನಗೆ ಗೊತ್ತಿಲ್ಲ? ಹಾಗೆಲ್ಲ ಕೇಳಬಾರದು. ನಡಿ. ಪ್ಲೀಜ್.'

'ದಿನಾ ಕುಡೀತಿದ್ದೀಯ. ಇವತ್ತು ಇನ್ಯಾವನ್ನೋ ಕರೆದುಕೊಂಡು ಬಂದು ಕುಡಿತಿದ್ದೀಯ. ಅಪ್ಪನಿಗೆ ಹೇಳ್ತೀನಿರು.'

'ಚಿನ್ನೂ...'

'ಯಾಕ್ ಚೀರ್ತೀಯ? ರಾಕ್ಷಸಿ. ನನ್ನ ಬಿಟ್ಟು, ಅಪ್ಪನ್ನ ಬಿಟ್ಟು ಮತ್ಯಾರೊಂದಿಗೋ. ಮರ್ಯಾದೆಯಿಂದ ಆತನ್ನ ಹೊರಗೆ ಕಳಿಸು. ಇಲ್ದಿದ್ರೆ...' ಕಾಲಿನಿಂದ ನೆಲಕ್ಕೆ ಧನ್ ಧನ್ ಅಂತ ಒದ್ದ.

ಆಕೆ ಕದಲಲಿಲ್ಲ.

'ಹಾಲು ಕುಡಿದ್ಯಾ?'

ಚಿನ್ನು ಉತ್ತರ ಕೊಡಲಿಲ್ಲ.

'ಚಿನ್ನು ನಿನ್ನೇ ಕೇಳೋದು. ಹಾಲು ಕುಡಿದ್ಯೋ ಇಲ್ಲೋ' ದೊಡ್ಡದಾಗಿ ಚೀರಿದಳು.

'ಇಲ್ಲ.'

'ಓಕೆ. ನಡಿ. ನಿಂಗೆ ಹಾಲು ಕೊಡ್ತೀನಿ. ನೀನು ಕುಡಿದು ಮುಗಿಸೋದರೊಳಗೆ ಈತನ್ನ ಹೊರಗೆ ಕಳಿಸ್ತೀನಿ. ಓಕೇನಾ? ಇಟ್ಸ್ ಎ ಮ್ಯಾಟರ್ ಆಫ್ ಟೆನ್ ಮಿನಿಟ್ಸ್.'

ಆಕೆ ಎದ್ದು ಚಿನ್ನುವನ್ನು ಸಮೀಪಿಸುತ್ತ ಅವನಿಗೆ ಕೇಳಿಸುವಂತೆ ನನ್ನೊಂದಿಗೆ ಇಂಗ್ಲೀಷಿನಲ್ಲಿ